**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 2136/2016**

ಹೆಸರು : ಕ್ಷೀತೀಜ್ ವತ್ಸ

ತಂದೆಯ ಹೆಸರುಃ ಮುರುಳಿದರ ಮಿಶ್ರ

ವಯಸ್ಸುಃ 29 ವರ್ಷ

ಉದ್ಯೋಗಃ ಖಾಸಗಿ ಕೆಲಸ

ವಾಸಃ ಫರಿದಾಬಾದ್, ಹರಿಯಾಣ

**PW-5, CW-5**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 03-07-2025**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ-1 ರಿಂದ 4, 6 ರಿಂದ 12 ನನಗೆ ಗೊತ್ತಿಲ್ಲ. ಚಾಸಾ-13 ನನ್ನ ತಂದೆ. ಚಾಸಾ-14 ನನ್ನ ಮಾವ.

2. ದಿ. 19-02-2016 ರಂದು ನನ್ನ ಹುಟ್ಟುಹಬ್ಬವಿದ್ದ ಕಾರಣ ನನ್ನ ತಾಯಿಯು ಫರಿದಾಬಾದ್ ನಿಂದ ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಬೆಳಿಗ್ಗೆ 9.00 ಗಂಟೆಗೆ ಬಂದು ನನಗೆ ದೂರವಾಣಿ ಕರೆ ಮಾಡಿ ನನ್ನನ್ನು ಎಮ್ ವಿ ಐ ಟಿ ಜಂಕ್ಷನ್ ಬಳಿಬಂದು ಕರೆದುಕೊಂಡು ಹೋಗು ಎಂದು ತಿಳಿಸಿರುತ್ತಾರೆ. ನಂತರ ನಾನು ನನ್ನ ಹಾಸ್ಟೇಲ್ ನಿಂದ ಹೊರಟು ಎಮ್ ವಿ ಐ ಟಿ ಜಂಕ್ಷನ್ ಬಳಿ ಹೋಗಿದ್ದು, ಆಗ ನನ್ನ ತಾಯಿಯು ದೇವನಹಳ್ಳಿಯಿಂದ ಬೆಂಗಳೂರಿಗೆ ಹೋಗುವ ರಸ್ತೆಯ ಎದುರಿನಲ್ಲಿ ನಿಂತಿದ್ದು, ಆಗ ನನ್ನ ತಾಯಿಯು ರಸ್ತೆಯನ್ನು ದಾಟುತ್ತಿದ್ದಾಗ ನಾನು ಅವರ ಬಳಿ ಹೋಗಬೇಕೆಂದು ನೋಡುತ್ತಿದ್ದಾಗ ಬೂದು ಬಣ್ಣದ ಮಾರುತಿ ಕಾರ್ ನಂ. ಕೆಎ-03-ಎಮ್ ಜೆ -9903 ನ ಚಾಲಕ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನನ್ನ ತಾಯಿಗೆ ಡಿಕ್ಕಿಪಡಿಸಿರುತ್ತಾರೆ. ಅದರ ಪರಿಣಾಮ ನನ್ನ ತಾಯಿಯು ಎಗರಿನ ಕಾರಿನ ಮೇಲೆ ಬಿದ್ದು ನಂತರ ಕೆಳಗೆ ಬಿದ್ದಿರುತ್ತಾರೆ. ಆಗ ಕಾರಿನ ಚಾಲಕನು ತನ್ನ ಕಾರನ್ನು ವೇಗವಾಗಿ ಸುಮಾರು 40-45 ಹೆಜ್ಜೆಗಳ ಮುಂದೆ ಹೋಗಿ ನಿಲ್ಲಿಸಿರುತ್ತಾರೆ. ಅದನ್ನು ನೋಡಿ ನಾನು ದಿಗ್ ಬ್ರಮೆಗೊಂಡಿದ್ದು, ಸದರಿ ನನ್ನ ತಾಯಿಯು ರಸ್ತೆಯ ಮೇಲೆ ಬಿದ್ದು ತಲೆ, ಕಿವಿ ಮತ್ತು ಕೈಗಳಿಂದ ರಕ್ತ ಸೋರುತ್ತಿದ್ದು, ಅಗ ನಾನು ರಸ್ತೆ ದಾಟಿ ಅವರ ಬಳಿ ಹೋಗಿರುತ್ತೇನೆ. ಅಲ್ಲದೇ ಸದರಿ ಅಪಘಾತಪಡಿಸಿದ ಕಾರು ಚಾಲಕನು ಕಾರನ್ನು ನಿಲ್ಲಿಸಿ ಕೆಳಗೆ ಇಳಿದು ಬಂದಿದ್ದು, ಕಾರನ್ನು ಮತ್ತು ಅದರ ಚಾಲಕನನ್ನು ನಾನು ಕಣ್ಣಾರೆ ನೋಡಿರುತ್ತೇನೆ. ಆಗ ನಾನು ಏನು ಮಾಡಬೇಕೆಂದು ತೋಚದೇ ಇದ್ದು ಸ್ಥಳದಲ್ಲಿ ತುಂಬಾ ಸಾರ್ವಜನಿಕರು ಮತ್ತು ಸಂಚಾರಿ ಪೋಲಿಸರು ಬಂದಿರುತ್ತಾರೆ. ನಂತರ ನಾನು ಸಂಚಾರಿ ಪೋಲಿಸರಿಗೆ ಅಪಘಾತಕ್ಕೊಳಗಾದವರು ನನ್ನ ತಾಯಿ ಎಂದು ನಾನು ಹೇಳಿರುತ್ತೇನೆ. ನಂತರ ಸಂಚಾರಿ ಪೋಲಿಸರು ನನ್ನ ತಾಯಿಯೊಂದಿಗೆ ಪೊಲೀಸ್ ಪೇದೆಯನ್ನು ಕೊಲಂಬಿಯಾ ಆಸ್ಪತ್ರೆಗೆ ಕಳುಹಿಸಿಕೊಡುವುದಾಗಿ ಹೇಳಿರುತ್ತಾರೆ. ನಾನು ಮತ್ತೆ ಅಪಘಾತಪಡಿಸಿದ ಕಾರನ್ನು ಮತ್ತು ಚಾಲಕನನ್ನು ನೋಡಲಾಗಿ ಅವನು

ಅಲ್ಲಿಂದ ಪರಾರಿಯಾಗಿರುತ್ತಾನೆ. ನಂತರ ಖಾಸಗಿ ಕಾರನ್ನು ತೆಗೆದುಕೊಂಡು ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ಹೋಗಿರುತ್ತೇನೆ. ಆಗ ಸಂಚಾರಿ ಪೋಲಿಸಿನವರು ವೈದ್ಯರೊಂದಿಗೆ ಮಾತನಾಡುವುದನ್ನು ನಾನು ನೋಡಿದ್ದು, ವೈದರು ಪೊಲಿಸರಿಗೆ ನನ್ನ ತಾಯಿಯು ಆಸ್ಪತ್ರೆಗೆ ಕರೆದುಕೊಂಡು ಬರುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ನಂತರ ನಾನು ನನ್ನ ತಂದೆಯಾದ ಚಾಸಾ-13 ರವರಿಗೆ ವಿಷಯ ತಿಳಿಸಿ ಅಲ್ಲಿಗೆ ಬರಲು ಹೇಳಿರುತ್ತಾನೆ. ಅದೇ ದಿನ ನಾನು ಪೋಲಿಸ್ ಠಾಣೆಗೆ ಹೋಗಿ ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ನ್ಯಾಯಾಲಯದಲ್ಲಿ ಗೈರುಹಾಜರಿದ್ದು, ಆತನ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ಹೇಳಿದ ಮೇರೆಗೆ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿರುತ್ತದೆ.

**ಪಾಟೀ ಸವಾಲುಃ ಶ್ರೀ ಎ ವಿ ಆರೋಪಿ ಪರ ವಕೀಲರಿಂದ**

ನಾನು 2016 ನೇ ಸಾಲಿನಲ್ಲಿ ಎರಡನೇ ವರ್ಷದ ಇಂಜಿನಿಯರಿಂಗ್ ಪದವಿ ಮಾಡುತ್ತಿದ್ದೆ. ನನ್ನ ಕಾಲೇಜಿನ ಸಮಯ ನನಗೆ ಈಗ ಹೇಳಲು ಆಗುವುದಿಲ್ಲ. ನಾನು ಎಮ್ ವಿ ಐ ಟಿ ಕಾಲೇಜಿನಲ್ಲಿ ವಿದ್ಯಾಬ್ಯಾಸ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ, ಸಾಕ್ಷಿಯು ಮುಂದುವರೆದು ನನ್ನ ಬಳಿ ದಾಖಲೆ ಇರುತ್ತದೆ ಎಂದು ನುಡಿಯುತ್ತಾರೆ. ದೇವನಹಳ್ಳಿಯಿಂದ ಬೆಂಗಳೂರಿಗೆ ಹೋಗುವ ರಸ್ತೆ ರಾಷ್ಟೀಯ ಹೆದ್ದಾರಿ ಎಂದರೆ ಸರಿ. ಎಮ್ ವಿ ಐ ಟಿ ಕ್ರಾಸ್ ಬಳಿ ಯಾವುದೇ ಸಂಚಾರಿ ಫಲಕ ಮತ್ತು ಪಾದಚಾರಿ ಮಾರ್ಗ ಇರುವುದಿಲ್ಲ ಎಂದರೆ ಸರಿಯಲ್ಲ. ಎಮ್ ವಿ ಐ ಟಿ ಕ್ರಾಸ್ ಬಳಿ ತೆರೆದ ರಸ್ತೆ ವಿಭಜಕ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಆದ್ದರಿಂದ ನನ್ನ ಹೇಳಿಕೆಯಲ್ಲಿ ಏನುಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನಾನು ನಡೆದ ಘಟನೆಯನ್ನು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಘಟನಾ ದಿನ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಆ ದಿನ ನನ್ನ ಹುಟ್ಟುಹಬ್ಬವಿದ್ದ ಕಾರಣ ನಾನು ಕಾಲೇಜಿಗೆ ಹೋಗುವ ವಿಚಾರ ಮಾಡಿರುವುದಿಲ್ಲ. ನಾನು ಪೋಲಿಸರ ಕೋರಿಕೆ ಮೇರೆಗೆ ಈ ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಿಮಾ ಪರಿಹಾರ ಹಣ ಪಡೆದುಕೊಳ್ಳಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಈ ಪ್ರಕರಣದಲ್ಲಿ ಬಾಗಿಯಾಗದೇ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳದಿಂದ ಆಸ್ಪತ್ರೆಗೆ ಹೋದ ಖಾಸಗಿ ವಾಹನದ ಸಂಖ್ಯೆ ಮತ್ತು ಅದರ ಮಾಡೆಲ್ ನನಗೆ ನೆನಪಿಲ್ಲ. ಆರೋಪಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,

ದೇವನಹಳ್ಳಿ.